ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಕಾಂತರಾಜ್ (ಬಿಎಂಎಲ್)
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 711

ಉತ್ತರ ದಿನಾಂಕ : 05.03.2021.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ (NRDWP)ಯನ್ನು ಯಾವ ಯೋಜನೆಯಡಿ ವಿಲೀನಗೊಳಿಸಲಾಗಿದೆ; ಈ ಯೋಜನೆಯ ಹೆಸರೇನು; (ವಿವರವಾದ ಮಾಹಿತಿ ನೀಡುವುದು);	ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮ (NRDWP) ಯೋಜನೆಯು ನೂತನವಾಗಿ ಅನುಷ್ಠಾನಗೊಂಡಿರುವ "ರಾಷ್ಟ್ರೀಯ ಜಲ ಜೀವನ್ ಮಿಷನ್" ಯೋಜನೆಯಡಿ ವಿಲೀನಗೊಳಿಸಲಾಗಿದೆ. ಈ ಯೋಜನೆಯ ಹೆಸರು: **"ರಾಷ್ಟ್ರೀಯ ಜಲ ಜೀವನ್ ಮಿಷನ್"** (NJJM)
ಆ)	ಆರ್ಥಿಕ ವರ್ಷ 2020-21ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; (ವಿವರವಾದ ಮಾಹಿತಿ ನೀಡುವುದು)	ಆರ್ಥಿಕ ವರ್ಷ 2020-21ನೇ ಸಾಲಿನಲ್ಲಿ ಜಲ್ ಜೀವನ್ ಮಿಷನ್ ಯೋಜನೆಯಡಿ 2019-20ನೇ ಸಾಲಿನ ಬಾಕಿ ಅನುದಾನ ಒಳಗೊಂಡಂತೆ ಕೇಂದ್ರದ ಪಾಲಿನ ರೂ.300.37ಕೋಟಿಗಳು ಮತ್ತು ರಾಜ್ಯದಪಾಲಿನ ರೂ.509.32ಕೋಟಿಗಳು ಮತ್ತು ಪೂರ್ಣ ರಾಜ್ಯ ಸರ್ಕಾರದ ಅನುದಾನ ರೂ.1468.09ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.
ಇ)	ಈ ಯೋಜನೆಯ Support Activity ಘಟಕದಡಿ ಬಿಡುಗಡೆ ಮಾಡಲಾದ ಹಣವೆಷ್ಟು; ಯಾವ ಯಾವ ಬಾಬ್ತುಗಳಿಗೆ ಖರ್ಚು ಮಾಡಲಾಗಿದೆ; (ವಿವರವಾದ ಮಾಹಿತಿ ನೀಡುವುದು)	ಈ ಯೋಜನೆಯ Support Activity ಘಟಕದಡಿ ರೂ.23.58ಕೋಟಿಗಳ ಅನುದಾನವನ್ನು ವಿಭಾಗಗಳಿಗೆ ಬಿಡುಗಡೆ ಮಾಡಲಾಗಿದೆ. Consultancy Cost, Establishment Cost, WSSO/CCDU Staff Salary, Setting up call centre, Maintenance of Hardware/IT software/stationary ಬಾಬ್ತುಗಳಿಗೆ ಫೆಬ್ರವರಿ-2021ರ ಅಂತ್ಯಕ್ಕೆ ಒಟ್ಟಾರೆ ರೂ.12.30ಕೋಟಿಗಳ ಅನುದಾನ ವೆಚ್ಚ ಮಾಡಲಾಗಿದೆ.
ಈ)	BRC/CRC ಸಂಯೋಜಕರುಗಳ ಮನವಿಯ ಮೇರೆಗೆ ಕೇಂದ್ರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ರಾಜ್ಯ ಸರ್ಕಾರಗಳಿಗೆ ಆರ್ಥಿಕ ಮತ್ತು ತಾಂತ್ರಿಕ ನೆರವನ್ನು ಮಾತ್ರ ನೀಡಲಾಗುತ್ತಿದೆಯೇ; ಸಿಬ್ಬಂದಿ ನೇಮಕವು ರಾಜ್ಯ ಸರ್ಕಾರದ ವಿವೇಚನೆಗೆ ಬಿಟ್ಟಿರುವುದು ನಿಜವೇ; (ವಿವರವಾದ ಮಾಹಿತಿ ನೀಡುವುದು)	ಕೇಂದ್ರ ಪುರಸ್ಕೃತ ಜಲ ಜೀವನ್ ಮಿಷನ್ ಯೋಜನೆಯ ಮಾರ್ಗಸೂಚಿಯಲ್ಲಿ BRC/CRCಗಳಿಗೆ ಸಂಬಂಧಪಟ್ಟಂತೆ ಕೆಲಸ-ಕಾರ್ಯಗಳನ್ನು ಪ್ರಸ್ತಾಪಿಸಿರುವುದಿಲ್ಲ ಮತ್ತು ಸದರಿಯವರ ನೇಮಕ ಸಂಬಂಧ ಕೇಂದ್ರ ಸರ್ಕಾರದಿಂದ ವಿಶೇಷವಾದ ಸೂಚನೆಗಳನ್ನು ಇಲಾಖೆ ಪಡೆದಿರುವುದಿಲ್ಲ.
ಉ)	ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ 7610CH ರಂತೆ ಸರ್ಕಾರವು Policy decision ಮಾಡಬೇಕಾಗಿರುವುದು ನಿಜವೇ;	ಜಲ ಜೀವನ್ ಮಿಷನ್ ಯೋಜನೆಯ ಮಾರ್ಗಸೂಚಿಗಳಲ್ಲಿ BRC/CRCಗಳ ಪ್ರಸ್ತಾಪವಿರುವುದಿಲ್ಲ ಹಾಗೂ ಮುಂದುವರೆಸಲು ಆಸ್ಪದವಿರುವುದಿಲ್ಲ.
ಊ)	ಯಾವ ಕಾಲಮಿತಿಯಲ್ಲಿ ಸರ್ಕಾರವು Policy Decisionಗಳ ಸೇವೆಯನ್ನು ಯಥಾವತ್ತಾಗಿ ಮುಂದುವರೆಸುವುದು?	ಉದ್ಭವಿಸುವುದಿಲ್ಲ.

ಸಂ:ಗ್ರಾಕುನೀ&ನೈಇ 53 ಗ್ರಾನೀಸ(4)2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು